# ಪರಿಷನ್ಮಂದಿರ...

ಕರ್ನಾಟಕ–ಕನ್ನಡದ ಬಗ್ಗೆ ತೀವ್ರವಾದ ಕಳಕಳಿಯುಳ್ಳ ವಿದ್ವಜ್ಜನರ ಪಡೆಯೊಂದು ನೂರಾಹತ್ತು ವರ್ಷಗಳ ಹಿಂದೆ ಸ್ಥಾಪಿಸಿದ 'ಕನ್ನಡ ಸಾಹಿತ್ಯ ಪರಿಷತ್' ನಾಡಿನ ಭಾಷೆ, ಸಾಹಿತ್ಯ ಮತ್ತು ಸಾಮಾಜಿಕ ಸಂಗತಿಗಳ ಬಗ್ಗೆ ಬದ್ಧತೆಯುಳ್ಳ ಪ್ರಮುಖ ಸಂಸ್ಥೆ. ಎರಡು ಮೂರು ವರ್ಷಗಳ ಪೂರ್ವಸಿದ್ಧತೆಯ ನಂತರ 1915ರಂದು ಸೆಂಟ್ರಲ್ ಕಾಲೇಜಿನ ಮುಂಭಾಗದ ಆರ್ಟ್ಸ್ ಅಂಡ್ ಸೈನ್ಸ್ ಕಾಲೇಜ್ ಕಟ್ಟಡದ ನಡುವಿನ ಸಭಾಮಂದಿರದಲ್ಲಿ 'ಕನ್ನಡ ಸಾಹಿತ್ಯ ಪರಿಷತ್ತು' ಸ್ಥಾಪನೆಯಾಯಿತು. ಆರಂಭದಲ್ಲಿ ಎಚ್.ವಿ. ನಂಜುಂಡಯ್ಯನವರು ಪ್ರಾರಂಭೋತ್ಸವದ ಉಪನ್ಯಾಸ ಮಾಡಿದರು. ಮೂರು ದಿನ ನಡೆದ ಪ್ರಾರಂಭೋತ್ಸವದ ಸಭೆಯಲ್ಲಿ ಟಿ.ಎಸ್. ವೆಂಕಣ್ಣಯ್ಯ, ಎ.ಆರ್. ಕೃಷ್ಣಶಾಸ್ತ್ರಿ, ಡಿವಿಜಿ, ಬೆಳ್ಳಾವಿ ವೆಂಕಟನಾರಣಪ್ಪ ಮುಂತಾದವರು ಭಾಗವಹಿಸಿದ್ದರು. ಜೊತೆಗೆ ಧಾರವಾಡ, ಬಳ್ಳಾರಿ, ಹೊಸಪೇಟೆ, ಆಗಿನ ಮದರಾಸು, ಮಂಗಳೂರು, ಮೈಸೂರು ಭಾಗಗಳಿಂದ ಹಾಗೂ ಬೆಂಗಳೂರಿನ ಆಸಕ್ತರು ಆರಂಭೋತ್ಸವದಲ್ಲಿ ಭಾಗವಹಿಸಿದ್ದರು. ಸಾಹಿತ್ಯ ಪರಿಷತ್ತಿನ ನಿಯಮಾವಳಿಗಳನ್ನು ತಯಾರು ಮಾಡಲು ನೇಮಕವಾಗಿದ್ದ ಉಪಸಮಿತಿ, ನಿಯಮಗಳ ಕರಡು ಪ್ರತಿಯನ್ನು ಸಭೆಗೆ ಒಪ್ಪಿಸಿ ಚರ್ಚಿಸಿತು. ಪರಿಷತ್ತಿನ ಮುಖ್ಯ ಸ್ಥಾಪಕ ಸದಸ್ಯರಲ್ಲೊಬ್ಬರಾದ ಬೆಳ್ಳಾವೆ ವೆಂಕಟನಾರಣಪ್ಪನವರ ಆಸಕ್ತಿಯ ಫಲವಾಗಿ ಈಗಿನ 'ಕೃಷ್ಣರಾಜ ಪರಿಷನ್ಮಂದಿರ'ದ ಕಟ್ಟಡಕ್ಕೆ ಅಸ್ತಿಭಾರ ಹಾಕಲಾಯಿತು. ಬೆಳ್ಳಾವೆ ಶಂಕರಯ್ಯ, ವೆಂಕಟರಾಮಯ್ಯನವರು ಸಂಶೋಧಕರಿಗೆ ಮತ್ತು ವಿದ್ಯಾರ್ಥಿಗಳಿಗೆ ಸಹಾಯವಾಗಲಿ ಎಂದು ತಮ್ಮ ಬಳಿಯಿದ್ದ ಖಾಸಗಿ ಪುಸ್ತಕ ಭಂಡಾರವನ್ನೇ ಸಾಹಿತ್ಯ ಪರಿಷತ್ತಿಗೆ ಕೊಡುಗೆಯಾಗಿ ನೀಡಿದರು. ಇಂತಹ ಮಹನೀಯರು ಹತ್ತಾರು ಜನ ಇದ್ದಾರೆ. ಪರಿಷತ್ತಿನ ಸ್ಥಾಪನೆಗಾಗಿ ನೂರಾರು ಕನ್ನಡ ಆಸಕ್ತರು ಸಾಹಿತಿಗಳು, ವಿದ್ವಾಂಸರು, ಅಧಿಕಾರಿಗಳು ಶ್ರಮಿಸಿದ್ದರು. ಎಂದು ದಾಖಲೆಗಳು ಹೇಳುತ್ತವೆ' (ಡಿವಿಜಿ ಮತ್ತು ಎಆರ್‌ಕೃ).

ನೂರಾಹತ್ತು ವರ್ಷಗಳನ್ನು ದಾಟಿ ಬಂದಿರುವ ಸಾಹಿತ್ಯ ಪರಿಷತ್ತು ನಡೆದುಬಂದಿರುವ ಹಾದಿಯನ್ನು ಒಮ್ಮೆ ಪರಿಶೀಲಿಸಿಕೊಳ್ಳುವ ಜರೂರು ಈಗ ಒದಗಿಬಂದಿದೆ. 'ಅಂದಿನ ಕಾರ್ಯಕರ್ತರ ಮೂಲೋದ್ದೇಶಗಳೇನಿದ್ದುವು, ಕಾರ್ಯನೀತಿ ಏನಿತ್ತು, ಅವು ಎಷ್ಟರಮಟ್ಟಿಗೆ ಈಡೇರಿದವು, ಅವುಗಳಲ್ಲಿ ಯಾವ ಯಾವ ಬದಲಾವಣೆ ಇಂದಿನ ಕಾಲಸ್ಥಿತಿ ಸ್ವರೂಪಗಳಿಗೆ ಅವಶ್ಯಕ ಎಂದು ಯೋಚಿಸುವುದು ಅಗತ್ಯ'. ಹಿಂದೊಮ್ಮೆ ಪ್ರಾಮಾಣಿಕರೂ, ಉದಾರಚರಿತರೂ ಆಗಿದ್ದ ಹಲವಾರು ವ್ಯಕ್ತಿಗಳು ಪರಿಷತ್ತಿನ ಅಧ್ಯಕ್ಷ ಸ್ಥಾನವನ್ನು ನಿರ್ವಹಿಸಿದ್ದರು. ಅಂತಹವರಿಂದಾಗಿ ಪರಿಷತ್ತು ನಾಡಿನ ಸಮಸ್ತರ ಗೌರವಕ್ಕೆ ಪಾತ್ರವಾಗಿತ್ತು. ಪರಿಷತ್ತು ಕಾಲ ಕಾಲಕ್ಕೆ ಹೊರತರುತ್ತಿದ್ದ 'ಕನ್ನಡ ನುಡಿ' ಮತ್ತು 'ಪರಿಷತ್ ಪತ್ರಿಕೆ' ಕನ್ನಡ ವಿದ್ವತ್ ಲೋಕದ ಪತ್ರಿಕೆಗಳಾಗಿದ್ದವು. ಹಿರಿಯ ಸಾಹಿತಿಗಳಿಗೆ ನೀಡಿ ಗೌರವಿಸುತ್ತಿದ್ದ 'ಗೌರವ ಸದಸ್ಯತ್ವ' ಇವೆಲ್ಲ ಈಗ ಹಿಂದಕ್ಕೆ ಸರಿದಿವೆ. ಸದಾ ಸಾಹಿತ್ಯಕ ಚಟುವಟಿಕೆಗಳಿಂದ ಗಮನ ಸೆಳೆಯುತ್ತಿದ್ದ 'ಶ್ರೀ ಕೃಷ್ಣರಾಜ ಪರಿಷನ್ಮಂದಿರ' ಈಗ ತನ್ನ ಗತಕಾಲವನ್ನು ನೆನಪಿಸಿಕೊಳ್ಳುತ್ತಿದೆ. ಶಾಲಾ ಶಿಕ್ಷಣದಲ್ಲಿ ಕನ್ನಡಕ್ಕೆ ನೀಡಬೇಕಾದ ಮೊದಲ ಸ್ಥಾನ, ಉದ್ಯೋಗಗಳಲ್ಲಿ ಕನ್ನಡಿಗರಿಗೆ ಆದ್ಯತೆ, ಖಾಸಗಿ ಕ್ಷೇತ್ರಗಳಲ್ಲಿ ಕನ್ನಡಿಗರಿಗೆ ಮೀಸಲು, ಹಿಂದಿ ಭಾಷೆಯ ಹೇರಿಕೆ, ಆಗಾಗ ಮರುಕಳಿಸುವ ಗಡಿ ಮತ್ತು ಜಲ ವಿವಾದಗಳಿಗೆ ಧ್ವನಿ ಎತ್ತಬೇಕಾಗಿದ್ದ ಸಾಹಿತ್ಯ ಪರಿಷತ್ತು ಈಗ ತನ್ನ ಚಟುವಟಿಕೆಯನ್ನು ವಾರ್ಷಿಕ ದತ್ತಿ ಪ್ರಶಸ್ತಿಗಳ ನೀಡುವಿಕೆ ಹಾಗೂ ಮುಖ್ಯವಾಗಿ ಸಾಹಿತ್ಯ ಸಮ್ಮೇಳನಗಳಿಗೆ ಮಾತ್ರ ಮೀಸಲಾಗಿರಿಸಿಕೊಂಡಿದೆ.

'ನಿಜವಾಗಿ ಪರಿಷತ್ತಿಗೆ ಯಾವಾಗ ರೋಗ ಬಡಿಯಿತು? ಬೆಳ್ಳಾವೆ ಅವರಿಗಿಂತಲೂ ಹೆಚ್ಚು ಅಸಾಹಿತಿಗಳಾದವರು ಇಲ್ಲಿ ಪ್ರವೇಶಿಸಿದಾಗ ಅಲ್ಲ, ಸರ್ಕಾರದ ಸುಲಭ ಹಣ ಇಲ್ಲಿ ನಿಯಂತ್ರಣವಿಲ್ಲದೆ ಹರಿಯತೊಡಗಿದಾಗ. ಕ್ರಮೇಣ ಪರಿಷತ್ತು ಹಣದ ಕೇಂದ್ರವಾಯಿತು. ಅಸಾಹಿತಿಗಳನ್ನು ಆಕರ್ಷಿಸಿತು. ಅಷ್ಟೇ ಅಲ್ಲ, ದುರ್ಬಲ ಸಾಹಿತಿಗಳನ್ನೂ ಸೋಲಿಸಿ ಭ್ರಷ್ಟರನ್ನಾಗಿಸಿತು. ಕಳೆದೆರಡು ದಶಕಗಳಲ್ಲಿ ಸರ್ಕಾರದ ಅಪಾರ ಮೊತ್ತದ ಹಣ ಸರಿಯಾದ ನಿಯಂತ್ರಣವಿಲ್ಲದೆ ಪರಿಷತ್ತಿನೊಳಗೆ ಹರಿದು ಬಂದಿದೆ. ಇದರಿಂದ ಒಂದು ಕಡೆ ಪರಿಷತ್ತು ಭ್ರಷ್ಟವಾಗಲು ಅವಕಾಶ ದೊರಕಿತು; ಇನ್ನೊಂದು ಕಡೆ, ಸಾರ್ವಜನಿಕ ಹಣ ಪೋಲಾಯಿತು. ಈ ಎರಡೂ ಸಂಗತಿಗಳನ್ನೂ ನಾವು ಸಮಾನವಾಗಿ ವಿರೋಧಿಸಬೇಕು' (ಕೆ.ವಿ. ಸುಬ್ಬಣ್ಣ). 'ಬಹುಮತ'ವೆಂದರೆ, ಅದು 'ಸರ್ವಸಮ್ಮತ'ವೆಂದರ್ಥವಲ್ಲ! ಲೇಖಕರು, ವಿದ್ವಾಂಸರು ಹಾಗೂ ಜನಾಭಿಪ್ರಾಯವನ್ನು ಧಿಕ್ಕರಿಸುವಷ್ಟು ಸಾಹಿತ್ಯ ಪರಿಷತ್ತು ಅಸೂಕ್ಷ್ಮವಾಗಬಾರದು. 'ಮಿತಿಯಲ್ಲಿ ಎಲ್ಲ ಒಳ್ಳೆಯದೆ; ಅತಿಯಿಂದ ಅಮೃತವೂ ವಿಷ'. ಜನತೆಯ ತೆರಿಗೆಯ ಹಣದಿಂದ ನಡೆಯುವ ಸಾಹಿತ್ಯ ಸಮ್ಮೇಳನಗಳನ್ನು ಗುಣಮಟ್ಟಕ್ಕೆ ಚ್ಯುತಿ ಬರದಹಾಗೆ ಮತ್ತು ಸರಳವಾಗಿ ಆಚರಿಸಿ ಎಂದು ಹೇಳುವುದು ಜನತೆಯ ಹಕ್ಕು. ಹಾಗೆಯೇ ಪರಿಷತ್ತಿನ ಒಳಗೆ ನಡೆಯುವ ವಿದ್ಯಮಾನಗಳನ್ನು ತಿಳಿಯುವ ಹಕ್ಕು ಎಲ್ಲ ಕನ್ನಡಿಗರಿಗಿದೆ. ಉತ್ತಮವಾದ ನಿಷ್ಕಳಂಕ ಕಾಳಜಿ ಎನ್ನುವುದು ಉನ್ನತವಾದ ನೀತಿಯುಕ್ತ ಭಾವನೆಯೆಂದು ತಿಳಿಯಬೇಕು.

ಕನ್ನಡ ಸಾಹಿತ್ಯ ಪರಿಷತ್ತಿನ ಅಸೂಕ್ಷ್ಮ ನಡಾವಳಿಗಳನ್ನು ನೋಡಿಯೇ ಲಂಕೇಶ್, ಪೂರ್ಣಚಂದ್ರ ತೇಜಸ್ವಿ, ಗಿರೀಶ್ ಕಾರ್ನಾಡ್, ಕೆ.ವಿ. ಸುಬ್ಬಣ್ಣ, ದೇವನೂರ ಮಹಾದೇವ ಮೊದಲಾದ ಸಂವೇದನಾಶೀಲ ಲೇಖಕರು ಸಾಹಿತ್ಯ ಪರಿಷತ್ತಿನ ಹೊಸತಿಲವರೆಗೂ ಬರಲಿಲ್ಲ. ಹಲವು ದಶಕಗಳ ಹಿಂದೆ ದೇವನೂರ ಮಹಾದೇವ ಸಾಹಿತ್ಯ ಪರಿಷತ್ತಿನ ಬಗ್ಗೆ ಹೀಗೆ ಹೇಳಿದ್ದರು 'ಸಾಹಿತ್ಯ ಪರಿಷತ್ತಿನಿಂದ ಸಾಹಿತ್ಯ ಸಮ್ಮೇಳನಗಳನ್ನು ಕಳೆದರೆ ಉಳಿಯುವುದೇನು?' ಎಂದು ಪ್ರಶ್ನಿಸಿದ್ದರು. ಸಾಹಿತ್ಯ ಪರಿಷತ್ತು ಎಷ್ಟೇ ಉದಾರಿಯಾಗಿದ್ದರೂ ಅದು ಇನ್ನೂ ದಲಿತರು, ಕೆಳಜಾತಿಗಳು, ಅಲ್ಪಸಂಖ್ಯಾತರು ಹಾಗೂ ಮಹಿಳೆಯರನ್ನು ಪೂರ್ಣ ಪ್ರಮಾಣದಲ್ಲಿ ಒಳಗೊಂಡಿಲ್ಲ ಎನ್ನುವುದೂ ಅಷ್ಟೇ ಸತ್ಯ! ಇಂತಹ ದೊಡ್ಡ ಕೊರತೆಯನ್ನು ನೀಗಿಸಲು ಪರಿಷತ್ತು ಕ್ರಿಯಾಶೀಲವಾಗಬೇಕು ಎಂಬುದೆ ಎಲ್ಲರ ಒತ್ತಾಸೆ.

ಅಧಿಕಾರ, ದ್ವೇಷ, ಪ್ರತೀಕಾರ ಮತ್ತು ಪ್ರತಿಷ್ಠೆಗಳ ಭಾರದಿಂದ 'ನವೆಯುತ್ತಿರುವ ದೀಪಕ್ಕೆ ತೈಲ'ವನ್ನು ಎರೆಯಲು, ನಾಡು–ನುಡಿಯ ಬಗ್ಗೆ ಕಳವಳ ಪಡುವಂಥ ಹೊಂಗನಸಿನ ವಿದ್ವಜ್ಜನರು ಎಲ್ಲ ಕಾಲದಲ್ಲೂ ಮುಂದಿರುತ್ತಾರೆ.

■ **ಜೆ.ವಿ. ಆನಂದಮೂರ್ತಿ**

## ಮಾತೇ ಮುತ್ತು

- ಎಲ್ಲಕ್ಕೂ ಹಗೆತನ ಸಾಧಿಸುವುದು ಅಥವಾ ಎಲ್ಲವನ್ನೂ ಕ್ಷಮಿಸುವುದು ಒಳ್ಳೆಯದಲ್ಲ; ಎರಡನ್ನೂ ಸರಿಯಾಗಿ ನಿರ್ವಹಿಸುವುದನ್ನು ಅರಿತರೆ ಸಮಸ್ಯೆ ಇರದು.

  —ಮಹಾಭಾರತ

- ಏನೂ ಅರಿಯೆನೆಂದು ಮೌನಗೊಂಡಿರಬೇಡ. ಕೂಡಲ ಸಂಗಮ ದೇವರ ಮುಂದೆ ದಂದಣ ಎನ್ನಿ, ದತ್ತಣ ಎನ್ನಿ.

  —ಬಸವಣ್ಣ

- ನೀವೆಲ್ಲರೂ ಮಹತ್ಕಾರ್ಯ ಮಾಡಲು ಹುಟ್ಟಿರುವಿರಿ. ನಾಯಿ ನರಿಗಳ ಬೊಗಳುವಿಕೆಯಿಂದ ಅಪ್ರತಿಭರಾಗಬೇಡಿ. ಸಿಡಿಲ ಗರ್ಜನೆಯೂ ನಿಮ್ಮನ್ನಂಜಿಸದಿರಲಿ.

  —ಸ್ವಾಮಿ ವಿವೇಕಾನಂದ

- ನೀವು ನಿದ್ದೆಯಲ್ಲಿ ಕಾಣುವುದು ಕನಸಲ್ಲ; ನಿಮ್ಮನ್ನು ನಿದ್ದೆ ಮಾಡಲು ಬಿಡದಿರುವುದೇ ನಿಜವಾದ ಕನಸು.

  —ಎಪಿಜೆ ಅಬ್ದುಲ್ ಕಲಾಂ

- ಕೆಲವರು ನನ್ನನ್ನು ಹೊಗಳುತ್ತಾರೆ. ಕೆಲವರು ತೆಗಳುತ್ತಾರೆ. ಏನಾದರೂ ಸರಿಯೇ ನನ್ನ ದಾರಿ ನನಗೆ.

  —ಸಂತ ಮೀರಾ ಬಾಯಿ

- ಅಂತಹ ಸಂತಸವೇ ಶಾಶ್ವತವಾಗಿ ಉಳಿದಿಲ್ಲ. ಇನ್ನು ಈ ಸಂಕಟದ್ದು ಯಾವ ಲೆಕ್ಕ?

  —ಮಿರ್ಜಾ ಗಾಲಿಬ್

- ಎಲ್ಲರನ್ನೂ ಮೆಚ್ಚಿಸುವಂತೆ ಬದುಕುವ ಕಲೆಯನ್ನು ನೀನು ರೂಢಿಸಿಕೊಂಡ ದಿನವೇ ನಿನ್ನ ಕೊನೆಯ ದಿನವಾಗುವುದು.

  —ಪಿ. ಲಂಕೇಶ್